ರೆವಿನ್ಯೂ ನಿವೇಶನದಲ್ಲಿರುವ ಅನಧಿಕೃತ ಮನೆಗಳನ್ನು ಸಕ್ರಮಗೊಳಿಸುವುದು.

1823-ಶ್ರೀ ಕೆ. ಲಕ್ಷ್ಮಣ (ರಾಜಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1991ನೇ ಜೂನ್ 30ರವರೆಗೆ ಬೆಂಗಳೂರು ನಗರದ ಸುತ್ತ ಎಷ್ಟು ರೆವಿನ್ಯೂ ನಿವೇಶನಗಳಲ್ಲಿ ಮನೆಗಳನ್ನು ಅಧಿಕೃತವಾಗಿ ನಿರ್ಮಿಸಲಾಗಿದೆ.*

ಆ) *ಈ ರೆವಿನ್ಯೂ ನಿವೇಶನ ಅಥವಾ ರೆವಿನ್ಯೂ ನಿವೇಶನಗಳಲ್ಲಿ ಕಟ್ಟಿರತಕ್ಕ ಮನೆಗಳನ್ನು ಆಯಾಯ ಮಾಲೀಕರುಗಳಿಗೆ ಸಕ್ರಮಗೊಳಿಸಲು ಸರ್ಕಾರ ತೀರ್ಮಾನ ಕೈಗೊಂಡಿದೆಯೇ?*

ಇ) *ತೀರ್ಮಾನ ಕೈಗೊಂಡಿಲ್ಲದಿದ್ದಲ್ಲಿ ಎಷ್ಟು ದಿವಸದಲ್ಲಿ ಆ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರೆವಿನ್ಯೂ ನಿವೇಶನಗಳಲ್ಲಿ ಅಧಿಕೃತವಾಗಿ ಮನೆಗಳನ್ನು ನಿರ್ಮಿಸಲಾಗುವುದಿಲ್ಲ.

ಆ) ಉತ್ತಮ ಪಟ್ಟಣ ಯೋಜನೆಯ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು,ನಗರ ಪ್ರದೇಶಗಳಲ್ಲಿನ ಕೆಲವು ರೀತಿಯ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸಲು ತೀರ್ಮಾನಿಸಲಾಗಿದೆ.

ಇ) (ಅ) ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಆಡಳಿತ ಸುಧಾರಣ ಇಲಾಖೆಯಿಂದ ವಾಹನಗಳ ಖರೀದಿಸಲಾದ ಸಂಖ್ಯೆ.

2650 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1-10-90 ರಿಂದ 10-08-91ರವರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಖರೀದಿಸಿರುವ ವಾಹನಗಳ ಸಂಖ್ಯೆ ಎಷ್ಟು ಅವುಗಳ ವಿವರಗಳೇನು?*

ಆ) *ಮೇಲ್ಕಂಡ ಕಾರುಗಳಿಗಾಗಿ ಖರ್ಚು ಮಾಡಿದ ಹಣವೆಷ್ಟು?*

ಇ) *ಈ ವಿಚಾರದಲ್ಲಿ ಸರ್ಕಾರದ ಆರ್ಥಿಕ ಮಿತವ್ಯಯವನ್ನು ಪಾಲಿಸದಿರಲು ಕಾರಣವೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿ) :

ಅ) ಹವಾನಿಯಂತ್ರಿತ ಕಾಂಟಿಸ್ಸಾ

ಕ್ಲಾಸಿಕ್ ಕಾರುಗಳು	22
ಅಂಬಾಸಿಡರ್ ಡೀಲಕ್ಸ್ ಕಾರುಗಳು	04
ಒಟ್ಟು	26

ಆ) 75,88,000-00 ರೂಗಳು

ಇ) 1956ರ ಕರ್ನಾಟಕ ಸಚಿವರ ಸಂಬಳ ಮತ್ತು ಭತ್ಯೆಗಳ ಅಧಿನಿಯಮಾನುಸಾರ, ಪ್ರತಿಯೊಬ್ಬ ಸಚಿವರು, ರಾಜ್ಯ ಸಚಿವರು ಮತ್ತು ಉಪಸಚಿವರು ತಮ್ಮ ಬಳಕೆಗಾಗಿ ಒಂದು ಕಾರನ್ನು ಪಡೆದುಕೊಳ್ಳಲು ಅರ್ಹತೆ ಹೊಂದಿರುತ್ತಾರೆ. ಕಾಲಕಾಲಕ್ಕೆ ರಾಜ್ಯಕ್ಕೆ ಬೇಟಿ ನೀಡುವ ಗಣ್ಯ ವ್ಯಕ್ತಿಗಳು ಮತ್ತು ರಾಜ್ಯ ಅತಿಥಿಗಳ ಉಪಯೋಗಕ್ಕಾಗಿಯೂ ಸಹ ಸರ್ಕಾರವು ಕಾರುಗಳನ್ನು ಒದಗಿಸಬೇಕಾಗುತ್ತದೆ. ಅಲ್ಲದೆ, ಸಚಿವರುಗಳ ಗಣ್ಯವ್ಯಕ್ತಿಗಳ

ಕನಿಷ್ಠ ಅವಶ್ಯಕತೆಗಳನ್ನು ಪೂರೈಸಲು ನಿಲುಗಡೆ ವಾಹನಗಳನ್ನು ಸಹ ಹೊಂದಿರಬೇಕಾಗುತ್ತದೆ. ದಿನಾಂಕ 1-10-90ರ ನಂತರ ಅಧಿಕಾರ ವಹಿಸಿಕೊಂಡ ಕೆಲವು ಸಚಿವರುಗಳಿಗೆ ಹೊಸ ಕಾರುಗಳನ್ನು ಒದಗಿಸಬೇಕಾಯಿತು. ಸಚಿವರು, ಗಣ್ಯ ವ್ಯಕ್ತಿಗಳು ಹಾಗೂ ಅವಶ್ಯಕ ನಿಲುಗಡೆ ವಾಹನಗಳ ವ್ಯವಸ್ಥೆಗಳನ್ನು ಪೂರೈಸಲು ಪ್ರಸ್ತುತ ಆತಿಥ್ಯ ಸಂಸ್ಥೆಯಲ್ಲಿರುವ ಕಾರುಗಳು ಸಾಕಾಗುವುದಿಲ್ಲ. ಆದಕಾರಣ ಅವಶ್ಯವಿರುವಷ್ಟು ಮಾತ್ರ ಹೆಚ್ಚುವರಿ ಕಾರುಗಳನ್ನು ಆರ್ಥಿಕ ಮಿತವ್ಯಯವನ್ನು ಸಡಿಲಿಸಿ, ಅನಿವಾರ್ಯವಾಗಿ ಖರೀದಿಸಲಾಗಿದೆ.

ವಿವೇಚನಾ ಖೋಟಾದಲ್ಲಿ ನಿವೇಶನಗಳ ಹಂಚಿಕೆ.

2651 - ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 1.10.1990ರಿಂದ 10.8.1991ರ ವರೆಗೆ ವಿವೇಚನಾ ಖೋಟಾದಲ್ಲಿ ಎಷ್ಟು ಜನರಿಗೆ ನಿವೇಶನಗಳನ್ನು ನೀಡಿದೆ?

ಆ) ಖೋಟಾದಲ್ಲಿ ನಿವೇಶನ ಪಡೆದಿರುವವರ ಹೆಸರು ಮತ್ತು ವಿಳಾಸ ಹಾಗೂ ಯಾವ ಕಾರಣಗಳಿಂದ ನೀಡಲಾಗಿದೆ(ವಿವರಗಳನ್ನೊದಗಿಸುವುದು)

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 1.10.1990 ರಿಂದ 10.8.1991ರ ವರೆಗಿನ ಅವಧಿಯಲ್ಲಿ ಯಾವುದೇ ನಿವೇಶನವನ್ನು ವಿವೇಚನಾ ಖೋಟಾದಲ್ಲಿ ನೀಡಿರುವುದಿಲ್ಲ.

ಆ) "ಅ" ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಬಕಾರಿ ಹರಾಜಿನ ಬಗ್ಗೆ

2649 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷ ನಡೆದ ವಾರ್ಷಿಕ ಅಬಕಾರಿ ಹರಾಜಿನಲ್ಲಿ ಭಾಗವಹಿಸುವರಿಗೆ ಪೂರ್ವಭಾವಿಯಾಗಿ ಹಾಕಿದ ಷರತ್ತುಗಳೇನು?

ಆ) ಮೇಲ್ಕಂಡ ಸಂದರ್ಭದಲ್ಲಿ ಹಣದ ಬದಲಾಗಿ ಬ್ಯಾಂಕ್ ಗ್ಯಾರಂಟಿ ನೀಡಲು ಅನುಮತಿ ನೀಡಲಾಗಿದೆಯೇ?

ಇ) ಹರಾಜಿನಲ್ಲಿ ಯಶಸ್ವಿಯಾದ ಕಂಟ್ರಾಕ್ಟರುಗಳ ಪೈಕಿ ಬ್ಯಾಂಕ್ ಗ್ಯಾರಂಟಿ ನೀಡಿದ ಕಂಟ್ರಾಕ್ಟರುಗಳ ಹೆಸರು ಮತ್ತು ವಿಳಾಸಗಳೇನು?

ಈ) ಮೇಲ್ಕಂಡ ಬ್ಯಾಂಕ್ ಗ್ಯಾರಂಟಿ ನೀಡಿದ ಬ್ಯಾಂಕ್‌ಗಳು ತನ್ನ ಜವಾಬ್ದಾರಿ ಹಿಂತೆಗೆದುಕೊಂಡ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಗುತ್ತಿಗೆದಾರರು ಹರಾಜಿನಲ್ಲಿ ಭಾಗವಹಿಸಲು ಅಬಕಾರಿ ಇಲಾಖೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿರಬೇಕು ಹಾಗೂ ಒಂದು ತಿಂಗಳ ಗುತ್ತಿಗೆ ಹಣದ ಮೊಬಲಗನ್ನು ಠೇವಣಿ ರೂಪದಲ್ಲಿ ಸಂದಾಯಿಸಬೇಕು.

ಆ) ಇಲ್ಲ.

ಇ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಈ) ಇಲ್ಲ.